

ಮೆಚ್ಚುವಂಥದ್ದೇ. ಆದರೆ, ಆ ತರ್ಕಕ್ಕೆ ಪೂರಕವಾಗಿ ಸಾಕ್ಷ್ಯಗಳು ಬೇಕಿದ್ದವು.

ಒಬ್ಬ ಪೊಲೀಸ್ ಒಂದು ಅಪರಾಧಕ್ಕೆ ನೂರು ಆರೋಪಿಗಳನ್ನು ಪ್ರಶ್ನಿಸಬಹುದು. ಆದರೆ, ಅಪರಾಧಿ ಎಂದು ನಿರ್ಧರಿಸುವುದು ಕೋರ್ಟ್. ಅದು ಕೇಳುವುದು ಥಿಯರಿ ಮಾತ್ರವಲ್ಲ, ಥಿಯರಿಯನ್ನು ಸಮರ್ಥಿಸುವ ಪುರಾವೆಗಳು, ಆ ಪುರಾವೆಗಳನ್ನೂ ವಾದ ಪ್ರತಿವಾದಗಳ ಕಟಕಟೆಯಲ್ಲಿ ಇಟ್ಟು ನ್ಯಾಯಾಧೀಶರಿಗೆ ತಾವು ಮುಂದಿಟ್ಟ ಥಿಯರಿ ಸರಿಯಾಗಿದೆ, ಅದಕ್ಕೆ ಪೂರಕವಾದ ಸಾಕ್ಷ್ಯಗಳು ನಂಬಲರ್ಹ ಎಂದು ಮನದಟ್ಟುಮಾಡಬೇಕು. ಅವು ಇಂಡಿಯನ್ ಎವಿಡೆನ್ಸ್ ಆಕ್ಟ್ ಪ್ರಕಾರ ಪರಿಗಣಿಸುವಂತಹ ಸಾಕ್ಷಿಗಳಾಗಿರಬೇಕು. ಇವೆಲ್ಲವನ್ನೂ ಸಮರ್ಥವಾಗಿ ನಿರ್ವಹಿಸಿದರೆ ಮಾತ್ರ ಆರೋಪಿಯನ್ನು ಅಪರಾಧಿ ಎಂದು ಶಿಕ್ಷೆಗೆ ಗುರಿಪಡಿಸಬಹುದು.

“ಆದರೆ, ಮಂಗಳಾ ಕೊಲೆ ಆದ ಸಮಯದಲ್ಲಿ ತರಕಾರಿ ತರಲು ಹೋಗಿದ್ದಳು ಎನ್ನುವುದಕ್ಕೂ ಸಾಕ್ಷಿ ಇದೆ ಅಲ್ಲವಾ?”

“ಹಾಗಾದ್ರೆ ಆ ದಿನ ಅಲ್ಲಿದ್ದಿದ್ದು ಒಬ್ಬಳೇ, ಹಂಸಿನಿ.”

ಅಮಿತಾ ಒಂದೊಂದೇ ಶಬ್ದಗಳನ್ನು ಬಿಡಿ ಬಿಡಿಸಿ ನುಡಿದಳು.

***

“ಭಾವನ ಪರಿಚಯ ಆಗಿದ್ದು ಒಂದು ಸಣ್ಣ ಆಕ್ಸಿಡೆಂಟ್‌ನಿಂದ. ಅವರ ಕಾರ್ ನನ್ನ ವೀಲ್‌ಚೇರ್‌ಗೆ ಟಚ್ ಆಗಿ ನಾನು ಬಿದ್ದಿದ್ದೆ. ಅಲ್ಲಿಂದ ಅಕ್ಕ ಭಾವ ಸ್ನೇಹಿತರಾದರು...” ಹಂಸಿನಿ ತಲೆ ತಗ್ಗಿಸಿಯೇ ಮಾತಾಡುತ್ತಿದ್ದಳು.

“ಬಾಳಿಗಾ ಶ್ರೀಮಂತ. ಹಿಂದೆ ಮುಂದೆ ಯಾರೂ ಇಲ್ಲ. ಅವರನ್ನು ಬುಟ್ಟಿಗೆ ಹಾಕಿಕೊಂಡು ಮದುವೆಯಾಗಿ ಬಿಟ್ಟರಾ ನಂದಿನಿ?”

ಹಂಸಿನಿಯನ್ನು ಡಿಸ್ಟರ್ಬ್ ಮಾಡಬೇಕಿತ್ತು. ಅವಳಲ್ಲಿ ಏನೋ ಸತ್ಯ ಅಡಗಿದೆ ಎನ್ನುವುದು ಅಮಿತಾಗೆ ತಿಳಿದಿತ್ತು. ಅದನ್ನು ಹೊರತರಲು ನಂದಿನಿಯ ಆ ಲೆಕ್ಕಾಚಾರದ ಮೌನವನ್ನು ಮುರಿಯಬೇಕಿತ್ತು.

“ಇಲ್ಲ, ನಿಜ ಹೇಳಬೇಕು ಅಂದರೆ ಭಾವನೇ ಅಕ್ಕನಿಗೆ ಪ್ರಪೋಸ್ ಮಾಡಿದ್ದು...”

“ಅವರಿಬ್ಬರ ಸಂಸಾರದಲ್ಲಿ ನೀವು ಬಂದಿರಿ... ಬಾಳಿಗಾಗೆ ಮಕ್ಕಳು ಬೇಕಿತ್ತು, ನಂದಿನಿಗೆ